
ಕಥೋಪದೇಶ




# ಶಿವಾಜಿಯ ದೃಢವಾದ ನಿಷ್ಠೆ

ಸಮರ್ಥ ರಾಮದಾಸರ ಅನೇಕ ಶಿಷ್ಯರಲ್ಲಿ ಛತ್ರಪತಿ ಶಿವಾಜಿ ಗುರುಗಳ ಅತ್ಯಂತ ಪ್ರೀತಿಪಾತ್ರನಾದ ಶಿಷ್ಯನಾಗಿದ್ದ. ಶಿವಾಜಿಯು ಮಹಾರಾಜನಾದ್ದರಿಂದ ಗುರುಗಳು ಅವನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದಾರೆ ಎಂದು ಉಳಿದ ಶಿಷ್ಯರು ಭಾವಿಸಿದ್ದರು. ಸಮರ್ಥ ರಾಮದಾಸರು ತಮ್ಮ ಶಿಷ್ಯರ ತಪ್ಪು ತಿಳಿವಳಿಕೆಯನ್ನು ಗಮನಿಸಿ ಅದನ್ನು ದೂರ ಮಾಡಲು ಬಯಸಿದರು.

ಒಂದು ದಿನ ರಾಮದಾಸರು ಶಿವಾಜಿಯೊಂದಿಗೆ ಉಳಿದ ಶಿಷ್ಯ ಮಂಡಳಿಯನ್ನು ಕರೆದುಕೊಂಡು ಕಾಡಿನಲ್ಲಿ ಹೋಗುತ್ತಿದ್ದರು. ರಾತ್ರಿಯಾಗುತ್ತಾ ಬಂತು. ಎಲ್ಲರೂ ಸಮೀಪದ ಒಂದು ಗುಹೆಗೆ ಹೋಗಿ ತಂಗಿದರು. ಇಡೀ ತಂಡ ಆ ಗುಹೆಯಲ್ಲಿ ವಿಶ್ರಮಿಸುತ್ತಿದ್ದಾಗ, ಸ್ವಲ್ಪ ಹೊತ್ತಿನ ನಂತರ ಗುರುಗಳು ನರಳುತ್ತಾ, ಕೂಗುತ್ತಿರುವುದು ಅವರ ಶಿಷ್ಯರಿಗೆ ಕೇಳಿಸಿತು. ಶಿಷ್ಯರೆಲ್ಲರೂ ಗುರುಗಳ ಬಳಿ ಬಂದು ಇಷ್ಟೊಂದು ನೋವಿನಿಂದ ಸಂಕಟಪಡುತ್ತಿರುವುದರ ಕಾರಣವನ್ನು ಕೇಳಿದರು. ಆಗ ರಾಮದಾಸರು ತಮಗೆ ಸಹಿಸಲು ಅಸಾಧ್ಯವಾದ ಹೊಟ್ಟೆನೋವು ಬಂದಿದೆ ಎಂದು ತಿಳಿಸಿದರು. ಯಾವ ಚಿಕಿತ್ಸೆಯ ಸೌಲಭ್ಯವೂ ಇಲ್ಲದ ಆ ಕಾಡಿನ ಗುಹೆಯಲ್ಲಿ ಶಿಷ್ಯರಿಗೆ ಏನು ಮಾಡಬೇಕೆಂಬುದು ತಿಳಿಯದೆ ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟರು. ಆದರೆ ಶಿವಾಜಿಯು ಮಾತ್ರ ಸುಮ್ಮನೆ ಕುಳಿತುಕೊಳ್ಳದೆ ಗುರುಗಳ ಹತ್ತಿರ ಹೋಗಿ, "ಗುರುಗಳೇ, ಈ ನೋವಿಗೆ ಯಾವ ಚಿಕಿತ್ಸೆಯೂ ಇಲ್ಲವೇನು?" ಎಂದು ಕೇಳಿದ. ಆಗ ರಾಮದಾಸರು ಹೇಳಿದರು, "ಶಿವಾ! ಇದಕ್ಕೆ ಇರುವುದೊಂದೇ ಉಪಾಯ. ಸಿಂಹಿಣಿಯ ಶುದ್ಧವಾದ ಹಾಲನ್ನು ತೆಗೆದುಕೊಂಡರೆ ಈ ನೋವು ವಾಸಿಯಾಗುವುದು. ಆದರೆ ದುರದೃಷ್ಟವಶಾತ್ ಅದರ ಹಾಲು ದೊರೆಯುವುದಿಲ್ಲವಲ್ಲ."

ಶಿವಾಜಿಯು ಗುರುಗಳ ಮಾತನ್ನು ಕೇಳಿ ತನ್ನ ಗುರುದೇವನ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಆ ಕಾಡಿನಲ್ಲಿ ಸಿಂಹಿಣಿಯನ್ನು ಹುಡುಕುತ್ತಾ ಹೊರಟ. ಸ್ವಲ್ಪ ಹೊತ್ತಿನ ನಂತರ ಒಂದು ಗುಹೆಯಿಂದ ಮೃಗದ ಗರ್ಜನೆಯು ಕೇಳಿಸಿತು. ಶಿವಾಜಿ ಆ ಗುಹೆಯನ್ನು ಸಮೀಪಿಸಿದಾಗ ಅಲ್ಲಿ ತನ್ನ ಎರಡು ಮರಿಗಳೊಂದಿಗೆ ಸಿಂಹಿಣಿಯೊಂದು ಇರುವುದನ್ನು ನೋಡಿದನು. ಹತ್ತಿರ ಹೋಗಿ, ಆ ಸಿಂಹಿಣಿಯ ಮುಂದೆ ವಿನಮ್ರತೆಯಿಂದ ಕೈಜೋಡಿಸಿಕೊಂಡು ಹೇಳಿದ, "ಅಮ್ಮ! ನಾನು ನಿನ್ನನ್ನು ಕೊಲ್ಲುವುದಕ್ಕೆ ಬಂದಿಲ್ಲ ಅಥವಾ ನಿನ್ನ ಮರಿಗಳನ್ನು ತೆಗೆದುಕೊಂಡು ಹೋಗಲು ಬಂದಿಲ್ಲ. ನನ್ನ ಗುರುದೇವರು ಹೊಟ್ಟೆನೋವಿನಿಂದ ನರಳುತ್ತಿದ್ದಾರೆ. ಅವರು ನಿನ್ನ ಹಾಲಿನಿಂದ ಮಾತ್ರ ನೋವು ವಾಸಿಯಾಗುವುದೆಂದು ತಿಳಿಸಿದ್ದಾರೆ. ನನ್ನ ಗುರು ಗುಣ ಹೊಂದಿದ ನಂತರ ನೀನು ಬೇಕಾದರೆ ನನ್ನನ್ನು ತಿನ್ನಬಹುದು."

ಶಿವಾಜಿಯ ಮಾತನ್ನು ಕೇಳುತ್ತ ಸಿಂಹಿಣಿಯು, ತನ್ನ ಕ್ರೂರ ಸ್ವಭಾವವನ್ನು ಮರೆತು ಅವನ ಪಾದಗಳನ್ನು ನೆಕ್ಕುವುದಕ್ಕೆ ಪ್ರಾರಂಭಿಸಿತು. ಶಿವಾಜಿಯು ಪ್ರೀತಿಯಿಂದ ಅದರ ಮೈಯನ್ನು ನೇವರಿಸಿದಾಗ, ಭಿಕ್ಷಾಪಾತ್ರೆಯ ತುಂಬ ಹಾಲನ್ನು ಹಿಂಡಲು ಅವಕಾಶಮಾಡಿಕೊಟ್ಟಿತು. ನಂತರ ಸಿಂಹಿಣಿಗೆ ನಮಸ್ಕರಿಸಿ, ಅದರ ಹಾಲಿದ್ದ ಆ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಗುರುದೇವನ ಹತ್ತಿರ ಬಂದನು. ಸಿಂಹಿಣಿಯ ಹಾಲನ್ನು ನೋಡಿ ಗುರು ರಾಮದಾಸರು : "ಅಯ್ಯೋ! ನಿಮ್ಮೆಲ್ಲರನ್ನೂ ಪರೀಕ್ಷೆ ಮಾಡುವುದಕ್ಕಾಗಿ ನಾನು ಹೊಟ್ಟೆನೋವಿನ ನೆಪವೊಡ್ಡಿದೆ. ಧನ್ಯ ನೀನು ಶಿವಾಜಿ! ಕೊನೆಗೂ ನನ್ನ ಪರೀಕ್ಷೆಯಲ್ಲಿ ನೀನು ಜಯಶಾಲಿಯಾದೆ. ಶಿವಾಜಿ! ನಿನ್ನಂತಹ ದೃಢ ನಿಷ್ಠೆಯುಳ್ಳ ಶಿಷ್ಯನಿದ್ದರೆ, ಗುರುವಿಗೆ ಯಾವುದಾದರೂ ದುಃಖ ನೋವುಗಳು ಬರುವುವೇನು?" ಎಂದು ನುಡಿದರು.



ಕಲೆ : ಜೆ.ಸಿ. ಸಿದ್ದಲಿಂಗಯ್ಯ, ದಾವಣಗೆರೆ